ಶ್ರೀ ಎಚ್. ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಹೌದು

ಆ) ದಿನಾಂಕ 20- 1- 1997 ರಂದು ಚಿಕ್ಕಮಗಳೂರಿನಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರವರು ಶಂಕುಸ್ಥಾಪನೆ ಮಾಡಿರುತ್ತಾರೆ.

ಇ) ಪೂರ್ವಭಾವಿ ತನಿಖಾ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ) ಸದರಿ ಯೋಜನೆಗೆ ಸಂಬಂಧಿಸಿದಂತೆ, ವಿನ್ಯಾಸ ಮತ್ತು ಅಂದಾಜುಗಳ ಅಂತಿಮ ರೂಪರೇಶ ಬಂದ ನಂತರ 2002ರಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು.

ಹಾಸನಜಿಲ್ಲೆ ಜಾವಗಲ್ ಸಮೀಪದ ಹಿರೇಕಟ್ಟೆ ವಡ್ಡಿನ ಸಾಲಾ ದುರಸ್ತಿ

1252 (1493) ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬಿರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನಜಿಲ್ಲೆ ಜಾವಗಲ್ ಸಮೀಪದ ಹಿರೇಕಟ್ಟೆ ವಡ್ಡಿನ ಅಣೆಕಟ್ಟಿನಿಂದ ಬೀರೂರು ಕ್ಷೇತ್ರದ ನಿಡಘಟ್ಟ ಭಾಗದ ಕಾಲುವೆ ಹಾಳಾಗಿಯವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಕಾಲುವೆಯ ದುರಸ್ತಿಯನ್ನು ಮಾಡಲಾಗುವುದೇ; ಎಂದಿನಿಂದ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹಾಸನ ಜಿಲ್ಲೆ ಜಾವಗಲ್ ಸಮೀಪದ ಹಿರೇಕಟ್ಟೆ ವಡ್ಡಿನ ಎಡದಂಡೆ ಕಾಲುವೆಯು ಬೀರೂರು ಕ್ಷೇತ್ರದ ನಿಡಘಟ್ಟದ ಬಳಿ ಅಲ್ಲಲ್ಲಿ ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮುಂದಿನ ವರ್ಷದ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ದುರಸ್ತಿ ಕೈಗೊಳ್ಳಲಾಗುವುದು.

ಚಿಕ್ಕಮಗಳೂರು ತಾಲ್ಲೂಕು ದಾಸರಹಳ್ಳಿ ಕೆರೆಯ ಮಾಹಿತಿ

1253 (1494) ಶ್ರೀ ಮಲ್ಲಿಕಾರ್ಜುನ ಕೆ.ಬಿ.(ಬೀರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ತಾಲ್ಲೂಕು ದಾಸರಹಳ್ಳಿ ಕೆರೆಯನ್ನು ಯಾವಾಗ ನಿರ್ಮಿಸಲಾಯಿತು? ನಿರ್ಮಾಣದ ವೆಚ್ಚವೆಷ್ಟು?

ಆ) ಈವರೆಗೆ ಎಷ್ಟು ಬಾರಿ ಕೆರೆ ತುಂಬಿದೆ? ತುಂಬದಿದ್ದರೆ ಕಾರಣವೇನು?

ಇ) ಈ ಕೆರೆ ತುಂಬಿಸಲು ಸರ್ಕಾರ ಏನಾದರೂ ಕಾರ್ಯಕ್ರಮವನ್ನು ರೂಪಿಸಿದೆಯೇ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 1967-68 ರಲ್ಲಿ ನಿರ್ಮಿಸಲಾಗಿದೆ. ಈ ಕೆರೆ ನಿರ್ಮಾಣದ ವೆಚ್ಚದ ವಿವರಗಳು ಲಭ್ಯವಿರುವುದಿಲ್ಲ.

ಆ) ಈವರೆಗೆ 3 ಬಾರಿ ತುಂಬಿರುತ್ತದ.ಎ ಉಳಿದ ವರ್ಷಗಳಲ್ಲಿ ಸಾಕಷ್ಟು ಮಳೆಯಾಗದೇ ಇರುವ ಕಾರಣ ಕೆರೆ ಪೂರ್ಣ ತುಂಬಿರುವುದಿಲ್ಲ. ಭಾಗಶಃ ತುಂಬಿರುತ್ತದೆ.

ಇ) ಅಗಸೆಹಳ್ಳದಿಂದ ಈ ಕೆರೆಗೆ ನೀರು ತುಂಬಿಸಲು ಪೋಷಕ ಕಾಲುವೆ ನಿರ್ಮಿಸಲು ಉದ್ದೇಶಿಸಿದ್ದು ಮುಂದಿನ ವರ್ಷದ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ರಾಜ್ಯದಲ್ಲಿ ಟೆಂಡರ್ ಪದ್ಧತಿಯ ಅನುಷ್ಠಾನ

1256 (1258) ಶ್ರೀ ಎಸ್.ಜೆ.ನಂಜಯ್ಯನಮಠ್ (ಗುಳೇದಗುಡ್ಡ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟೆಂಡರ್ ಪದ್ಧತಿಯನ್ನು ಅಮೂಲಾಗ್ರವಾಗಿ ಅನುಷ್ಠಾನಕ್ಕೆ ತಂದ ಮೇಲೆ ಕಾಮಗಾರಿ ವೇಗ ಕಡಿಮೆಯಾಗುತ್ತಿದೆಯೇ;

ಆ) ತುಂಡು ಗುತ್ತಿಗೆಯ ಪದ್ಧತಿಯಲಿ ಕೆಲಸಗಳು ವೇಗವಾಗಿ ಸಾಗುತ್ತವೆಯಂತೆ; ನಿಜವೇ;

ಇ) ರಾಜ್ಯದಲ್ಲಿ ಟೆಂಡರ್ ಪದ್ಧತಿಯನ್ನು ಸಮಗ್ರವಾಗಿ ಅನುಷ್ಠಾನಕ್ಕೆ ತಂದ ಮೇಲೆ ಇಲಾಖೆಗೆ ಎಷ್ಟು ಲಾಭವಾಗಿದೆ?

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಕಾಮಗಾರಿಗಳ ವೇಗ ಕಡಿಮೆ ಆಗಿಲ್ಲ.

ಆ) ಇಲ್ಲ

ಇ) ಟೆಂಡರ್ ಪದ್ಧತಿ ಅನುಷ್ಠಾನಕ್ಕೆ ತಂದ ಮೇಲೆ ಇಲಾಖೆಗೆ ಕಾಮಗಾರಿಗಳಲ್ಲಿ ಪರೋಕ್ಷವಾಗಿ ಲಾಭವಾಗಿದ್ದು ನಿಖರವಾಗಿ ಅಂದಾಜು ಮಾಡಲು ಸಾಧ್ಯವಿರುವುದಿಲ್ಲ.

ರಾಜ್ಯದಲ್ಲಿ ಪಡಿತರ ಕಾರ್ಡುಗಳಿಗೆ ಸೀಮೆ ಎಣ್ಣೆ, ಸಮರ್ಪಕವಾಗಿ ವಿತರಣೆಯಾಗದಿರುವುದು

1258 (209) ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ವಿತರಣೆಯಾಗಿರುವ ಣಳದಿ, ಹಸಿರು ಮತ್ತು ಕೆಂಪು ಚೀಟಿಗಳು ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಒಟ್ಟು ಪಡಿತರ ಕಾರ್ಡುಗಳಿಗೆ ವಿತರಣೆ ಯಾಗುತ್ತಿರುವ ಸೀಮೆ ಎಣ್ಣೆಯ ಪ್ರಮಾಣ ಎಷ್ಟು?